೭ನೇ ಪುಟಕ್ಕೆ

# ವಿದ್ವಾನ್ ರಂಗನಾಥಶರ್ಮರಿಗೆ ತವರೂರಿನಲ್ಲಿ ಆತ್ಮೀಯ ಸನ್ಮಾನ

ವಯೋವೃದ್ಧರೂ ಜ್ಞಾನವೃದ್ಧರೂ ಆಗಿರುವ ನಡಹಳ್ಳಿ ರಂಗನಾಥಶರ್ಮರು ಸಂಸ್ಕೃತಕ್ಕಾಗಿ ಕೇಂದ್ರಸರ್ಕರ ಕೊಡುವ ಮಹಾಮಹೋಪಾಧ್ಯಾಯ ಬಿರುದಲ್ಲದೇ ರಾಜ್ಯ ಸರ್ಕಾರದ ವತಿಯಿಂದಲೂ ವಿವಿಧ ಸಂಘಟನೆಗಳಿಂದಲೂ ಅನೇಕ ಪ್ರಶಸ್ತಿ ಪುರಸ್ಕಾರಗಳಿಂದ ಸಂಪನ್ನರಾದವರು. ಸೊರಬದ ಕ್ಯಾಸನೂರು ಸೀಮೆ ಅವರ ತವರು ನೆಲ.

ವಿದ್ವಾನ್ ರಂಗನಾಥಶರ್ಮರನ್ನು ಅವರ ತವರು ಜನ ಇತ್ತೀಚೆಗೆ ಒಂದು ಅದ್ದೂರಿಯ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ರಾಮಚಂದ್ರಾಪುರ ಮಠದ ಕ್ಯಾಸನೂರು ಸೀಮಾ ಪ್ರತಿನಿಧಿ ಪರಿಷತ್ ತಲಕಾಲುಕೊಪ್ಪದ ಗ್ರಾಮ ದೇವಸ್ಥಾನದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಗೌರವ ಸ್ವೀಕರಿಸಿದ ರಂಗನಾಥ ಶರ್ಮರು ತಮ್ಮ ತವರಿನ ಬಂಧು ಬಾಂಧವರು ನೀಡಿದ ಆತ್ಮೀಯ ಗೌರವಾರ್ಪಣೆಗೆ ತಾವು ಸದಾ ಋಣಿಯಾಗಿರುವು ದಾಗಿ ನಮ್ರತೆಯಿಂದ ನುಡಿದರು. ಅವರು ಮಾತನಾಡಿ, 'ನಿತ್ಯ ಜೀವನದಲ್ಲಿ ಹೊಸ ಚೇತನದ ದಿಕ್ಕನ್ನು ಸೂಚಿಸುವ ಧರ್ಮಶಾಸ್ತ್ರಗಳು ತತ್ತ್ವಾಧಾರಿತ ವೇದ ಸೂತ್ರಗಳು, ಪರಂಪರೆಯಿಂದ ಬಂದ ಸಂಸ್ಕೃತಿಗಳು, ವರ್ತಮಾನ ಕಾಲದ ಮಹಿಮೆಯಿಂದ ಇಂದಿನ ಜನರಿಗೆ ವೇದ ವಿದ್ಯೆಗಳ ಮೂಲ ತತ್ತ್ವಗಳು, ಧರ್ಮ ಸಂಸ್ಕೃತಿಗಳ ನಡವಳಿಕೆಗಳು ಬೇಡವಾಗಿದೆ.

'ಸಮಾಜ ಮತ್ತು ಜನತೆ ಉದ್ಧಾರವಾಗಬೇಕಾದರೆ ಸಮಾಜದ ಪ್ರತಿಯೊಂದು ಕುಟುಂಬದ ಪುರುಷ ಮಹಿಳೆಯರು ಆತ್ಮಶೋಧನೆಯ ಆಧ್ಯಾತ್ಮಿಕ ಚಿಂತನೆಗೆ ಪೂರಕವಾಗಬಲ್ಲ ವೇದ ಮತ್ತು ಧರ್ಮ ಸಂಸ್ಕೃತಿಗಳ ಪರಿಪಾಲನೆಯಲ್ಲಿ ಏಕತಾ ಮನೋಭಾವವನ್ನು ಬೆಳೆಸಿಕೊಂಡು ನಿತ್ಯ ಜೀವನದ ಸಂಪ್ರದಾಯಬದ್ಧವಾಗಿ ಸಮಾಜದಲ್ಲಿ ರೂಢಿಗೆ ತರಬೇಕು. ಇದರಿಂದ ಮುಂದಿನ ಪೀಳಿಗೆಯವರಿಗೆ ವೇದ ವಿದ್ಯೆಗಳ ಸಂಸ್ಕೃತಿಗಳ ನೀತಿ ಧೋರಣೆ ಸಮಾಜದ ಒಳಿತಿನ ಮೇಲೆ ಪ್ರಭಾವ ಬೀರಬಲ್ಲದು. ಇವುಗಳನ್ನು ಉಳಿಸಿ ಬೆಳೆಸುವಲ್ಲಿ ಹವ್ಯಕ ಸಮಾಜ ಬಾಂಧವರು ದೃಢ ಸಂಕಲ್ಪ ಮಾಡಬೇಕು' ಎಂದು ಶರ್ಮರು ಒತ್ತಾಯ ಪೂರ್ವಕ ವಿನಂತಿ ಮಾಡಿಕೊಂಡರು.

ಈ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಶಾಸಕರೂ ಹವ್ಯಕ ಸಮಾಜದ ಹಿರಿಯರೂ ಆದ ಎಲ್.ಟಿ. ತಿಮ್ಮಪ್ಪ ಹೆಗಡೆಯವರು ಮಾತನಾಡಿ, 'ಹೃದಯವಂತಿಕೆ, ಸತ್ಯದ ತತ್ತ್ವನಿಷ್ಠೆ ಮತ್ತು ಒಂದು ವಿಷಯದ ಮೇಲೆ ಅಧ್ಯಯನ ಮತ್ತು ಸಂಶೋಧನಾ ದೃಷ್ಟಿ, ಏಕಾಗ್ರತೆಯ ಶ್ರಮದಿಂದ ಸಮಾಜಕ್ಕೆ ರಾಷ್ಟ್ರಕ್ಕೆ ಸಮರ್ಪಿಸಬೇಕೆಂಬ ಭಾವನೆಯು ಯಾವ ವ್ಯಕ್ತಿಯಲ್ಲಿರುತ್ತದೆಯೋ ಅಂಥವರನ್ನು ಗುರುತಿಸಿ ಇಡೀ ರಾಷ್ಟ್ರವೇ ಗೌರವಿಸುತ್ತದೆ' ಎಂದು ರಂಗನಾಥ ಶರ್ಮರು ಅಂತಹವರು ಎಂದು ಹೇಳಿದರು.

ಹೆಗಡೆಯವರು ಮುಂದುವರಿದು ಮಾತನಾಡಿ, 'ಹಿಂದಿನಿಂದಲೂ ಸಂಸ್ಕೃತ ಭಾಷೆಯಲ್ಲಿ ಆದಮ್ಯ ಆಸಕ್ತಿ ತೋರಿದ ರಂಗನಾಥ ಶರ್ಮರು ಅಧ್ಯಯನ ಅಧ್ಯಾಪನ ಮಾಡಿ, ವಾಲ್ಮೀಕಿ, ವ್ಯಾಸ ಮುಂತಾದ ಮಹಾ ಋಷಿಗಳಿಗೆ ಸಮಾಂತರವಾಗಿ ಕಲಿಯುಗದ ಮಹಾಋಷಿಗಳಾಗಿ ತ್ರಿಭಾಷಾ ಪಾಂಡಿತ್ಯದ ಅಧ್ಯಯನಶೀಲರಾಗಿ, ಸಂಸ್ಕೃತದಲ್ಲಿ 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕನ್ನಡಕ್ಕೆ ಅನುವಾದಿಸಿ ಸಂಸ್ಕೃತ ಭಾಷೆಯಲ್ಲಿಯೇ ಅನೇಕ ಗ್ರಂಥಗಳನ್ನು ಬರೆದು ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಸಮರ್ಪಿಸಿದ್ದಾರೆ. ಇದನ್ನು ಗುರುತಿಸಿ ಕೇಂದ್ರ ಸರ್ಕಾರವು 40 ವರ್ಷಗಳಿಂದೀಚೆಗೆ (೪ನೇಪುಟಕ್ಕೆ)